# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 536

2) ಮಾನ್ಯ ಸದಸ್ಯರ ಹೆಸರು : ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3) ಉತ್ತರಿಸುವ ದಿನಾಂಕ : 11/12/2025

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
| --- | --- | --- |
| ಅ) | ಬೀದರ್ ಜಿಲ್ಲೆ ಹುಮನಾಬಾದ್ ಮತಕ್ಷೇತ್ರದ ಬಸವಕಲ್ಯಾಣ ತಾಲ್ಲೂಕಿನ ರಾಜೇಶ್ವರಿ ಪಟ್ಟಣಕ್ಕೆ ನೂತನ ಪೋಲೀಸ್ ಠಾಣೆ ಪ್ರಾರಂಭಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮವೇನು; | ಬೀದರ್ ಜಿಲ್ಲೆ ಹುಮನಾಬಾದ್ ಮತಕ್ಷೇತ್ರದ ಬಸವಕಲ್ಯಾಣ ತಾಲ್ಲೂಕಿನ ರಾಜೇಶ್ವರಿ ಪಟ್ಟಣದಲ್ಲಿ ನೂತನ ಪೋಲೀಸ್ ಠಾಣೆ ಪ್ರಾರಂಭಿಸುವ ಕುರಿತು ಯಾವುದೇ ಪ್ರಸ್ತಾವನೆಯು ಪರಿಶೀಲನೆಯಲ್ಲಿರುವುದಿಲ್ಲ. |
| ಆ) | ರಾಜೇಶ್ವರಿ ಪಟ್ಟಣವು ಸುಮಾರು 25000 ಜನಸಂಖ್ಯೆ ಹೊಂದಿದ್ದು ಹಾಗೂ ರಾಷ್ಟ್ರೀಯ ಹೆದ್ದಾರಿ ಹೊಂದಿಕೊಂಡು ಇರುವ ಪಟ್ಟಣದಲ್ಲಿ ಇಬ್ಬರು ಸಿಬ್ಬಂದಿಗಳೊಂದಿಗೆ ಹೊರ ಠಾಣೆಯಿದ್ದು, ಇದು ಎಷ್ಟರ ಮಟ್ಟಿಗೆ ಅಪರಾಧ ಪ್ರಕರಣ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡಬಹುದು; | ರಾಜೇಶ್ವರಿ ಪೊಲೀಸ್ ಹೊರ ಠಾಣೆಯು ಬಸವಕಲ್ಯಾಣ ಗ್ರಾಮೀಣ ಪೊಲೀಸ್ ಠಾಣೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಹೊರ ಠಾಣೆಯಲ್ಲಿ ಸಿಹೆಚ್‌ಸಿ-02 ಮತ್ತು ಸಿಪಿಸಿ-04 ಒಟ್ಟು 06 ಹುದ್ದೆಗಳ ಮಂಜೂರಾತಿ ಬಲವಿದ್ದು, ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಠಾಣೆಯಾದ ಬಸವಕಲ್ಯಾಣ ಗ್ರಾಮೀಣ ಪೊಲೀಸ್ ಠಾಣೆಯಿಂದ ಅಗತ್ಯ ಸಿಬ್ಬಂದಿ ಬಲವನ್ನು ನಿಯೋಜಿಸಲಾಗುತ್ತಿದೆ. |
| ಇ) | ಸದರಿ ನೂತನ ಪೋಲೀಸ್ ಠಾಣೆಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು? (ಮಾಹಿತಿ ನೀಡುವುದು) | ಪ್ರಶ್ನೆ 'ಅ'ರಲ್ಲಿ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. |

**ಸಂಖ್ಯೆ: ಹೆಚ್‌ಡಿ 221 ಪಿಓಪಿ 2025**

**(ಡಾ|| ಜಿ.ಪರಮೇಶ್ವರ)**
ಗೃಹ ಸಚಿವರು.